ಹೇಗೆ ಹೇಳಲಿ? ಅಷ್ಟಕ್ಕೂ ನಾನು ಮದುವೆಯಾಗಬೇಕೇ? ಜ್ಯೋತಿಯ ಮೇಲಿನ ನನ್ನ ಅನುರಾಗ ಇಲ್ಲಿಗೇ ಮುಗಿಯಬೇಕೇ? ಇವೆಲ್ಲದಕ್ಕೂ ಮುನ್ನ ವೈಷ್ಣವಿಯ ಮನಸ್ಸಿನಲ್ಲೇನಿದೆ? ಒಂದೂ ಅರ್ಥಕ್ಕೆ ನಿಲುಕದಾಯಿತು. ಏನೇ ಆದರೂ ಸಂಜೆ ಅವಳೊಂದಿಗೆ ಮತಾಡಲೇಬೇಕೆಂದು ಲೆಕ್ಕಹಾಕಿ ಮಧ್ಯಾಹ್ನದ ಕಿರುನಿದಿರೆಗೆಂದು ಅಡ್ಡಾದೆ.

★★★

ರಾತ್ರೆ ಬಾಕಿಯಾದ ನಿದಿರೆಯನ್ನೆಲ್ಲ ಮುಗಿಸಿ ಎದ್ದಾಗ ಮನಸ್ಸು ಹಗುರಾಗಿತ್ತು. ಎದ್ದು ಮುಖ ತೊಳೆದುಕೊಂಡು ಒಳಬಂದವನೆದುರು ಅಚ್ಚರಿಯೆಂಬಂತೆ "ಆಯ್ತಾ ನಿದ್ರೆ?" ಎನ್ನುತ್ತಾ ವೈಷ್ಣವಿ ಕಾಫಿ ಲೋಟದ ಸಮೇತ ಹಾಜರಾದಳು. ನಾನಾಗಿ ಕೇಳುವ ಮೊದಲೇ "ದೇವಸ್ಥಾನಕ್ಕೆ ಹೋಗ್ಬರೋಣ್ವ?" ಎಂದು ನನ್ನ ಆಲೋಚನೆಯನ್ನು ನೇರ ಕಣ್ಣಿನಿಂದಲೇ ಕದ್ದವಳಂತೆ ಕೇಳಿಬಿಟ್ಟಳು. ಸುಮಾರು ಹದಿಮೂರು ವರ್ಷಗಳ ಹಿಂದಿನ ಸಂಜೆಯೊಂದು ಮತ್ತೆ ಜೀವಂತವಾದ ಹಳೆಯ ದಾರಿಯಲ್ಲಿ ಇಬ್ಬರೂ ನಡೆಯತೊಡಗಿದೆವು.

''ಮತ್ತೆ ಏನಂತ ಡಿಸೈಡ್ ಮಾಡಿದ್ರಿ ಸಾರ್?''

ಗುಡ್ಡದಲ್ಲಿ ಅಡ್ಡಾಗಿ ಒರಗಿದ್ದ ಮರದ ಮೇಲೆ ಕೂರುತ್ತಾ ಕೇಳಿದವಳ ಮಾತಿನಲ್ಲಿ ಎಂದಿನ ಸಲುಗೆಯಿತ್ತು. ನಮ್ಮ ಮಾತುಗಳನ್ನು ಆಲಿಸಲಿಕ್ಕಾಗಿಯೇ ಎಂಬಂತೆ ಸುತ್ತಲಿನ ಕಾಡು ನವಿರಾದ ನಿಶ್ಯಬ್ದದಲ್ಲಿ ನಿಂತಿತ್ತು.

''ನನಗೇನೂ ತೋಚುತ್ತಿಲ್ಲ ವೈಶು. ಕಳೆದೊಂದು ವರ್ಷದಲ್ಲಿ ನನ್ನ ಬದುಕಿನ ಅತಿ ಚಿಕ್ಕ ಹೊಯ್ದಾಟವನ್ನೂ ಬಿಡದೆ ನಿನ್ನ ಬಳಿ ಹೇಳಿಕೊಂಡಿದ್ದೇನೆ. ಜ್ಯೋತಿಯ ಮೇಲಿನ ನನ್ನ ಅನುರಾಗವನ್ನು ಅವಳಿಗೆ ಹೇಳಿದ್ದಕ್ಕಿಂತ ಹೆಚ್ಚಿಗೆ ನಿನ್ನ ಬಳಿ ತೋಡಿಕೊಂಡಿದ್ದೇನೆ. ಅವಳ ಕುರಿತಾದ ನನ್ನ ಚಿಕ್ಕ ಕನವರಿಕೆಯೂ ನಿನಗೆ ಗೊತ್ತಿದೆ. ಈಗ ಅದೇ ಕನಸುಗಳೊಳಗೆ ನೀನು ತುಂಬಿಕೋ ಎಂದು ಹೇಗೆ ಹೇಳಲಿ? ನಿನ್ನ ಕಲ್ಪನೆಯಲ್ಲಿರುವ ವರ ನಾನಾಗಲಾರೆನೆಂಬ ಸತ್ಯ ಗೊತ್ತಿದ್ದೂ."

ಮಾತಿನ ಉಳಿದ ಭಾಗವನ್ನು ನೀನೇ ಪೂರ್ತಿಮಾಡೆಂಬಂತೆ ಅಲ್ಲಿಗೇ ನಿಲ್ಲಿಸಿಬಿಟ್ಟೆ.

"ಕಲ್ಪನೆ... ಯಾರಿಗಿಲ್ಲ ಹೇಳು? ನಿನಗಿಲ್ವಾ? ನಿನ್ನ ಜ್ಯೋತಿಗಿಲ್ವಾ? ಕಲ್ಪನೆಗಳೆಲ್ಲ ನೂರಕ್ಕೆ ನೂರರಷ್ಟು ನಿಜವಾಗುವುದು ಕಲ್ಪನೆಯಲ್ಲಿ ಮಾತ್ರ! ಅಷ್ಟಕ್ಕೂ ನೀನು ನಾನು ಬಯಸಿದಂತಿಲ್ಲ ಅಂತ ಯಾಕಂದುಕೊಂಡೆ?"

ಆಶ್ಚರ್ಯದಿಂದ ನೋಡಿದೆ. ಮದುವೆಯ ವಿಷಯ ಎದ್ದಾಗಿನಿಂದಲೂ ಮುಖ ತಪ್ಪಿಸಿಕೊಂಡು ಓಡಾಡುತ್ತಿದ್ದವಳಿಂದ ಇಂತಹಾದ್ದೊಂದು ಮಾತನ್ನು ನಿರೀಕ್ಷಿಸಿಯೇ ಇರಲಿಲ್ಲ. ಬೆಳಗಿನಿಂದ ಸಂಭವಿಸುತ್ತಿದ್ದ ಅಚ್ಚರಿಗಳ ಪೈಕಿ ಇದೇ ದೊಡ್ಡದೆನಿಸಿತು. ವೈಷ್ಣವಿ ಮುಂದುವರಿಸಿದಳು.

"ಜ್ಯೋತಿ ಜ್ಯೋತಿ ಅಂತ ಅಷ್ಟೆಲ್ಲ ಕಥೆ ಹೇಳಿದೆಯಲ್ಲ? ನೀನು ಹೇಳುತ್ತಿದ್ದಿ ಅಂತಷ್ಟೇ ಅದನ್ನ ಕೇಳಿಸಿಕೊಳ್ಳುತ್ತಿದ್ದೆ ಅಂದುಕೊಂಡೆಯಾ? ಅಷ್ಟಕ್ಕೂ ನಿನ್ನ ಬದುಕಿನಲ್ಲಿ ಆ ಜ್ಯೋತಿ ಯಾರು ಗೊತ್ತಾ? ಮಂಜು ಕವಿದ ಯಾವುದೇ ಗಾಜು ಕಂಡರೂ ಅದರ ಮೇಲೆ ಬರೆಯುತ್ತೀಯಲ್ಲ... ಆ ಹೆಸರೇ ಜ್ಯೋತಿ. ಕಥೆ ಪುಸ್ತಕದ ಮಧ್ಯದಲ್ಲೆಲ್ಲೋ ಸಾಲೊಂದರಲ್ಲಿ ಬಂದ 'ಜ್ಯೋತಿ' ಪದವನ್ನು ಹೆಕ್ಕಿ ಅಂಡರ್ ಲೈನ್ ಮಾಡ್ತೀಯಲ್ಲಾ, ಆ ವಿಶೇಷಣವೇ ಜ್ಯೋತಿ. ಹಸಿರು ಬಣ್ಣದ ಅಂಗಿ ಹಾಕಿಕೊಂಡು 'ಇದು ಅವಳ ಚೂಡಿದಾರಕ್ಕೆ ಮ್ಯಾಚ್ ಆಗ್ತಿತ್ತು' ಅಂತೀಯಲ್ಲಾ, ಆ ನೆನಪೇ ಜ್ಯೋತಿ. ಅವಳು ಮರೆತ ನಿನ್ನ ಹುಟ್ಟುಹಬ್ಬದ ದಿನ ಮೊಬೈಲ್ ರಿಂಗಾದಾಗೆಲ್ಲ 'ಅವಳೇ' ಅಂತ ಆಸೆಯಿಂದ ಎತ್ತಿಕೊಳ್ತೀಯಲ್ಲಾ, ಆ ಹುಚ್ಚು ನಿರೀಕ್ಷೆಯೇ ಜ್ಯೋತಿ. ಯಾವತ್ತೂ ಇಲ್ಲದವನು ಅವಳ ಹುಟ್ಟು ಹಬ್ಬದ ದಿನ ದೇವಸ್ಥಾನಕ್ಕೆ ಹೋಗಿ ನಿಲ್ಲುತ್ತೀಯಲ್ಲಾ, ಆ ಪ್ರಾರ್ಥನೆಯೇ ಜ್ಯೋತಿ. ಅವಳೆಂದರೆ ನಿನ್ನ ಪಾಲಿಗೆ ಅಷ್ಟೇ ಕಣೋ...